# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 119/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಬಾಲರಾಜು | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇ.ಅಣ್ಣಯ್ಯಪ್ಪ | | **14.09.2023** |
| **ವಯಸ್ಸು** | ಃ 54 **ವರ್ಷ** | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** | ಃ 09 |
| **ವಾಸಸ್ಥಳ** | ಃ ಕುವೆಂಪುನಗರ | **ಚಾ.ಸಾ.** | ಃ 16 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಲತಾ ಇವರ ಪರಿಚಯ ಇಲ್ಲ. ಮೃತ ಶಿವಪ್ರಕಾಶ್ ಇವರು ನನ್ನ ಸಂಬಂಧಿಯಾದ್ದರಿಂದ ಅವರ ಪರಿಚಯ ಇದೆ. ಶಿವಪ್ರಕಾಶ್ ಇವರ ಮನೆಯವರ ಪರಿಚಯ ಇದೆ. ಆರೋಪಿ ಸಾಗರ್ ಇವರ ಪರಿಚಯ ಇದೆ. ಶಿವಪ್ರಕಾಶ್ ಇವರು ಏನು ವ್ಯವಹಾರ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಲತಾ ಇವರ ಗಂಡ ನಾಗರಾಜು, ಅವರ ಮಗ ನಾಗಾರ್ಜುನ ಮತ್ತು ಹೆಣ್ಣು ಮಕ್ಕಳಾದ ರಶ್ಮಿ ಮತ್ತು ನಿಮಿಷಾಂಭ ಇವರ ಪರಿಚಯ ಇಲ್ಲ. ಶಿವಪ್ರಕಾಶ್ ಇವರು ಮರಣಹೊಂದಿದಾಗ ಕೆ.ಆರ್.ಆಸ್ಪತ್ರೆಯಲ್ಲಿ ಶಿವಪ್ರಕಾಶ್ ಇವರ ಶವ ಪರೀಕ್ಷೆ ಮಾಡಿದ ನಂತರ ಆ ಶವವನ್ನು ಸಂಬಂಧಿಕರಿಗೆ ಹಸ್ತಾಂತಿರುವ ಕಾಲಕ್ಕೆ ನಾನು ಸಹಿ ಮಾಡಿದ್ದೆ. ಈಗ ನಾನು ನೋಡುತ್ತಿರುವ ಶವ ತನಿಖಾ ವರದಿ ಅದೇ ಇದ್ದು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ದಾಖಲೆಯನ್ನು ನಿ.ಪಿ*23* ಮತ್ತು ಸಹಿಯನ್ನು ನಿ.ಪಿ–*23(ಎ)* ಎಂದು ಗುರುತಿಸಿದೆ. ನಾನು ನಿ.ಪಿ–*23* ಕ್ಕೆ ಸಹಿ ಮಾಡಿ *2* ವರ್ಷವಾಗಿದೆ ಆದರೆ ದಿನಾಂಕ ನೆನಪಿಲ್ಲ. ನಾನು ಸಹಿ ಮಾಡಿದ ದಿನ ಬೇರೆ ಯಾವ ವ್ಯಕ್ತಿಯ ಶವ ಪಂಚನಾಮೆ ಮಾಡಿದ್ದರು

ಎಂದು ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ಪೋಟೋದಲ್ಲಿ ನಾನು ಇದ್ದೇನೆ ಅದನ್ನು ಶಿವಪ್ರಕಾಶ್ ಅವರ ಶವ ಪಂಚನಾಮೆ ಕಾಲಕ್ಕೆ ತೆಗೆದಿದ್ದೇನೆ. ಆ ಪೊಟೋದಲ್ಲಿ ಕಾಣುವ ಶವ ಗಂಡಸರದ್ದೋ ಹೆಂಗಸದ್ದೊ ಎಂದು ನನಗೆ ಗೊತ್ತಿಲ್ಲ. ಸದರಿ ಪೊಟೋವನ್ನು ನಿ.ಪಿ-*24* ಎಂದು ಗುರುತಿಸಿದೆ. ಶಿವಪ್ರಕಾಶ್ ಇವರು ಯಾವ ಕಾರಣಕ್ಕೆ ಮರಣಹೊಂದಿದ್ದು ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಹಾಕಿದ್ದನ್ನು ಬಿಟ್ಟು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಆರೋಪಿ ಸಾಗರ್ ನನ್ನು ಯಾವ ಕಾರಣಕ್ಕೆ ಕೋರ್ಟ್ ಮುಂದೆ ಹಾಜರು ಪಡಿಸಿದ್ದಾರೆ ಎಂದು ಗೊತ್ತಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*22.10.2021* ರಂದು ನನ್ನ ಮತ್ತು ಶ್ರೀನಿವಾಸ್ ಇವರ ಸಮಕ್ಷಮ ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜು ಶವಗಾರದಲ್ಲಿ ಮೃತ ಲತಾ ಇವರ ಶವ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಮೃತ ಲತಾ ಇವರ ಶವವನ್ನು ನನಗೆ ತೋರಿಸಿದ್ದರು ಮತ್ತು ಆ ಕಾಲಕ್ಕೆ ಲತಾ ಇವರ ಬಾಯಿಯ ಎಡಭಾಗದಿಂದ ಕತ್ತಿನ ಹಿಂಭಾಗದವರೆಗೆ, ಬಾಯಿಯ ಬಲ ತುದಿ, ಬಲ ಕೆನ್ನೆ, ಗದ್ದ, ಬಲ ಕೈ ಹಸ್ತ, ಬಲ ಕೈ ಮೊಣ ಸಂದು, ಬಲ ಭುಜ, ತಲೆ ಗಳಿಗೆ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಆ ಕಾಲಕ್ಕೆ ಮೃತ ಲತಾ ಇವರ ಶವದ ಕುರಿತು ನಿ.ಪಿ-*23* ರಂತೆ ಪಂಚನಾಮೆ ಬರೆದು ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ಆ ಲತಾ ಇವರ ಶವ

ಪಂಚನಾಮೆ ಕಾಲಕ್ಕೆ ನಿ.ಪಿ-24 ಪೋಟೋ ತೆಗೆದಿದ್ದರು ಎಂದರೆ ಗೊತ್ತಿಲ್ಲ. ನಿ.ಪಿ-24 ರಲ್ಲಿ ಪೋಟೋದಲ್ಲಿ ಕಾಣುವ ಶವ ಲತಾ ಇವರದ್ದು ಎಂದರೆ ನನಗೆ ಗೊತ್ತಿಲ್ಲ.

3. ಶಿವಪ್ರಕಾಶ್ ಇವರು 20 ವರ್ಷಗಳಿಂದ ಟೂರ್ಸ್ ಮತ್ತು ಟ್ರಾವೆಲ್ಸ್ ವ್ಯವಹಾರ ಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಶಿವಪ್ರಕಾಶ್ ಇವರ ಜೊತೆ ಡ್ರೈವರ್ ಕೆಲಸ ಮಾಡುತ್ತಿದ್ದ ನಾಗರಾಜು ಇವರು 15 ವರ್ಷಗಳ ಹಿಂದೆ ಮರಣಹೊಂದಿದ್ದರು ಎಂದರೆ ಗೊತ್ತಿಲ್ಲ. ನಾಗರಾಜು ಮೃತ ಪಟ್ಟ ನಂತರ ಶಿವಪ್ರಕಾಶ್ ಇವರು ಆ ನಾಗರಾಜು ಇವರ ಮನೆಗೆ ಹೋಗಿ ಬಂದು ಮಾಡಿಕೊಂಡಿದ್ದು ನಾಗರಾಜು ಹೆಂಡತಿ ಲತಾ ಇವರ ಜೊತೆ ಸಂಬಂಧ ಇಟ್ಟುಕೊಂಡು ಅವರ ಮಕ್ಕಳಾದ ರಶ್ಮಿ, ನಿಮಿಷಾಂಭ ಮತ್ತು ನಾಗಾರ್ಜುನ ಇವರ ವಿದ್ಯಾಭ್ಯಾಸವನ್ನು ಮತ್ತು ರಶ್ಮಿ ಮದುವೆಯನ್ನು ಶಿವಪ್ರಕಾಶ್ ಇವರೇ ಮಾಡಿಸಿದ್ದರು ಎಂದರೆ ಗೊತ್ತಿಲ್ಲ. ನಂತರದ ದಿನಗಳಲ್ಲಿ ಶಿವಪ್ರಕಾಶ್ ಇವರು ಲತಾ ಇವರ ಮನೆಯಲ್ಲೇ ಹೆಚ್ಚಿಗೆ ಇರುತ್ತಿದ್ದು ಅವರ ಹೆಂಡತಿ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ಶಿವಪ್ರಕಾಶ್ ಇವರ ಮಗಳು ನವ್ಯಶ್ರೀ ಕೆ.ಜಿ.ಕೊಪ್ಪಲಿನ ಬೋರೇಗೌಡರ ಮಗ ರವಿ ಎನ್ನುವವರನ್ನು ಪ್ರೀತಿಸಿ ಮದುವೆಯಾಗಿದ್ದರಿಂದ ಆ ವಿಚಾರಕ್ಕೂ ಸಹ ಶಿವಪ್ರಕಾಶ್ ಗೆ ಬೇಜಾರಾಗಿ ಅವರು ಮನೆಗೆ ಸರಿಯಾಗಿ ಬರುತ್ತಿರಲಿಲ್ಲ ಮತ್ತು ಹೆಂಡತಿ ಮಕ್ಕಳಿಗೆ ಸಹಾಯ ಮಾಡುತ್ತಿರಲಿಲ್ಲ ಎಂದರೆ ಗೊತ್ತಿಲ್ಲ. ಶಿವಪ್ರಕಾಶ್ ಇವರು ಸಂಪಾದನೆ ಮಾಡಿದ ಹಣವನ್ನು ಲತಾ ಮತ್ತು ಅವರ ಮನೆಯವರಿಗೆ ಕೊಡುತ್ತಾರೆ ಎನ್ನುವ ವಿಚಾರಕ್ಕೆ ಶಿವಪ್ರಕಾಶ್ ಇವರ ಹೆಂಡತಿ ವಿಶಾಲಾಕ್ಷಮ್ಮ ಮತ್ತು ಅವರ ಮಗ ಸಾಗರ್ ಆಗಾಗ ಜಗಳ ಮಾಡುತ್ತಿದ್ದು ಆ ಕಾಲಕ್ಕೆ ನಾನು, ಶಿವಪ್ರಕಾಶ್ ಇವರ ತಮ್ಮ ಮಹೇಶ ಮತ್ತು ಸ್ನೇಹಿತ ಶ್ರೀನಿವಾಸ ಸಮಾಧಾನ ಮಾಡುತ್ತಿದ್ದೇವು ಎಂದರೆ ಸರಿಯಲ್ಲ.

*4.* ನಂತರವೂ ಸಹ ಶಿವಪ್ರಕಾಶ್ ಇವರು ಲತಾರವರ ಗಂಡ ನಾಗರಾಜು ಸಾಯುವ ಸಮಯದಲ್ಲಿ ತನ್ನ ಹೆಂಡತಿ ಮಕ್ಕಳನ್ನು ನೋಡಿಕೊಳ್ಳುವಂತೆ ನನಗೆ ತಿಳಿಸಿದ್ದಾರೆ ಆದ್ದರಿಂದ ನಾನು ಅವರನ್ನು ಕೈ ಬಿಡುವುದಿಲ್ಲ ಎಂದು ಹೇಳಿ ಅವರ ಮನೆಗೆ ಹೋಗುವುದನ್ನು ನಿಲ್ಲಿಸಿರಲಿಲ್ಲ ಎಂದರೆ ಗೊತ್ತಿಲ್ಲ. *2020* ರ ನವೆಂಬರ್ ತಿಂಗಳಲ್ಲಿ ಶಿವಪ್ರಕಾಶ್ ಇವರು ತನ್ನ ಹೆಸರಿನಲ್ಲಿದ್ದ ಮೈಸೂರು ದಡದಹಳ್ಳಿ ರಸ್ತೆಯ ರೈಲ್ವೇ ಗೇಟ್ ಬಳಿ ಇದ್ದ ಒಂದು ನಿವೇಶನವನ್ನು ನಾಗರಾಜು ಇವರ ಹೆಂಡತಿ ಲತಾ ಇವರ ಹೆಸರಿಗೆ ಕ್ರಯ ಪತ್ರ ಮಾಡಿಸಿಕೊಟ್ಟು ಅದೇ ನಿವೇಶನದಲ್ಲಿ ಅವರೇ ಜವಬ್ದಾರಿ ವಹಿಸಿ ಮನೆ ಕಟ್ಟಿಸಿಕೊಟ್ಟಿದ್ದರು ಮತ್ತು ಆ ಮನೆಯಲ್ಲಿ ಲತಾ ಮತ್ತು ಅವರ ಮಗ ನಾಗಾರ್ಜುನ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ*21.10.2021* ರಂದು ರಾತ್ರಿ ಶಿವಪ್ರಕಾಶ್ ಇವರು ಲತಾ ಇವರ ಮನೆಯಲ್ಲಿ ಮಾತನಾಡುತ್ತಾ ಕುಳಿತಿದ್ದು ತಮ್ಮ ಮನೆಗೆ ಹೋಗಲು ಆ ಮನೆಯಿಂದ ಹೊರಗಡೆ ಬಂದಾಗ ಆರೋಪಿ ಸಾಗರ್ ನು ನೀನು ಇವರ ಮನೆಗೆ ಬರಬೇಡ ಎಂದರು ಕೇಳದೇ ಬರುತ್ತೀಯಾ ಜಗಳ ತೆಗೆದು ಮಚ್ಚಿನಿಂದ ಹೊಡೆದು ಶಿವಪ್ರಕಾಶ್ ಮತ್ತು ಜಗಳ ಬಿಡಿಸಲು ಬಂದ ಲತಾ ಇವರನ್ನು ಕೊಲೆ ಮಾಡಿದ್ದಾನೆ ಎಂದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ.

*5.* ಶಿವಪ್ರಕಾಶ್ ಲತಾ ಇವರೊಂದಿಗೆ ಸಂಬಂದ ಇಟ್ಟುಕೊಂಡು ಸಂಪಾದನೆ ಮಾಡಿದ ಹಣವನ್ನು ಅವರಿಗೆ ಮತ್ತು ಅವರ ಮನೆಯವರಿಗೆ ಖರ್ಚು ಮಾಡುತ್ತಾರೆ, ತನ್ನ ಹೆಂಡತಿ ಮಕ್ಕಳಿಗೆ ಸಹಾಯ ಮಾಡುವುದಿಲ್ಲ, ಮನೆಗೆ ಸರಿಯಾಗಿ ಬರುವುದಿಲ್ಲ, ಸಾಗರ್ ಮಾಡಿಕೊಂಡಿದ್ದ ಸಾಲ ತೀರಿಸಲು ಹಣ ಸಹಾಯ ಮಾಡುತ್ತಿಲ್ಲ ಮತ್ತು ತನ್ನ ಹೆಂಡತಿ ವಿಶಾಲಾಕ್ಷಮ್ಮ ಇವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹಣ ಕೇಳಿದರೆ ಸಾಗರ್ ಗೆ ನಿನ್ನ ತಾಯಿಯನ್ನು ಎಲ್ಲಿಯಾದರು ತಲೆ ಹಿಡಿದು ಕರೆದುಕೊಂಡು ಹೋಗು ಎಂದು ಹೇಳುತ್ತಾರೆ ಎನ್ನುವ ಕಾರಣದಿಂದ ಸಾಗರ್ ನು

ಮಚ್ಚಿನಿಂದ ಹೊಡೆದು ಶಿವಪ್ರಕಾಶ್ ಮತ್ತು ಲತಾ ಇವರನ್ನು ಕೊಲೆ ಮಾಡಿದ್ದಾನೆ ಮತ್ತು ನಾಗಾರ್ಜುನನಿಗೆ ಹೊಡೆದು ಗಾಯ ಮಾಡಿರುತ್ತಾನೆ ಎಂದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ನಾನು ಶಿವಪ್ರಕಾಶ್ ಮತ್ತು ಲತಾ ಇಬ್ಬರ ಶವಗಳನ್ನು ನೋಡಿದ್ದೆ ಎಂದರೆ ಸರಿಯಲ್ಲ. ಶಿವಪ್ರಕಾಶ್ ಇವರು ನನ್ನ ಸ್ನೇಹಿತ ಇರುವ ಕಾರಣ ಅವರ ಮಗನಿಗೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ನಾನು ಶಿವಪ್ರಕಾಶ್ ರವರು ---------- ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*25* ಎಂದು ಗುರುತಿಸಿದೆ. ನಿ.ಪಿ-*24* ಪೊಟೋವನ್ನು ಲತಾ ಇವರ ಶವ ಪಂಚನಾಮೆ ಕಾಲಕ್ಕೆ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಎಂ.ಒ *9* ಮತ್ತು *10* ಎಂದು ಗುರುತಿಸಿದ ನೈಟಿ ಮತ್ತು ಪೆಟಿಕೋಟ್ ಶವ ಪಂಚನಾಮೆ ಕಾಲಕ್ಕೆ ಲತಾ ಇವರ ಮೈ ಮೇಲೆ ಇದ್ದ ಬಟ್ಟೆಗಳು ಎಂದರೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ಒಳ ವಸ್ತ್ರಗಳು ಸಹ ಲತಾ ಇವರ ದೇಹದ ಮೇಲೆ ಇದ್ದ ಬಟ್ಟೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದ:- ಇಲ್ಲ

.

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು